# ಅರವತ್ತನಾಲ್ಕು ಮನೆಗಳ ಜೀವನಪಾಠ

**ಟೀವಿಯ ಮಬ್ಬಿನಿಂದ ಮಕ್ಕಳನ್ನು ಚೆಸ್ ಆಟದ ಬೆಳಕಿನಲ್ಲಿ ಕೂರಿಸಿ. ಚದುರಂಗದ ಆಟ ಏಕಾಗ್ರತೆಗೆ ಪೂರಕ. ಯೋಚನಾಶಕ್ತಿಗೂ ಪ್ರೇರಕ. ಆಡಾಡತಾ ಬದುಕಿನ ಸಾಧ್ಯತೆಗಳನ್ನು ಮನದಟ್ಟು ಮಾಡಿಸುವ ಅಪೂರ್ವ ಆಟ ಚೆಸ್!**

■ ಸ್ವಯಂಪ್ರಭಾ

ಮಕ್ಕಳ ಕೈಗೆ ಮೊಬೈಲ್ ಬದಲು ಪತ್ರಿಕೆ ಕೊಡುವುದು ಒಳ್ಳೆಯ ಐಡಿಯಾವಷ್ಟೇ. ಅಂತೆಯೇ ಟೀವಿಯ ಮುಂದೆ ಕೊಳೆತ ಆಲೂಗೆಡ್ಡೆಗಳಂತೆ ಕುಳಿತಿರುವ ಎಳೆಯರನ್ನು ಅಲ್ಲಿಂದ ಏಳಿಸಬೇಕಿದೆ. ಎಬ್ಬಿಸಿ ಎಲ್ಲಿ ಕೂರಿಸುವುದು ಎಂದಿರಾ? ಚದುರಂಗದ ಮಣೆಯ ಎದುರು ಕೂರಿಸಿ.

ಚದುರಂಗದ ಹಾಸಿನಲ್ಲಿ, ಅರ್ಥಾತ್ ಚೆಸ್ ಬೋರ್ಡ್‌ನಲ್ಲಿ ಜೀವನದ ಪಾಠಗಳಿವೆ. ಚೆಸ್ ಆಟದಲ್ಲಿ ನಡೆಸುವ ಪ್ರತಿ ಕಾಯಿಯೂ ಆಪ್ತಮಿತ್ರನಂತೆ ಬದುಕಿಗೆ ಬೇಕಾದ ಪಾಠಗಳನ್ನು ಉಸುರುತ್ತದೆ. ಒಂಟೆಯ ನೇರನೋಟ, ಕುದುರೆಯ ಪಾರ್ಶ್ವನೋಟ, ಗಜಗಾಂಭೀರ್ಯ, ರಾಜನ ರಕ್ಷಣೆಯ ಬಗ್ಗೆ ಒಂದು ಕಣ್ಣಿರಿಸಿಯೇ ಎದುರಾಳಿ ಪಾಳಯದ ಮೇಲೆ ದಳಿ ಮಾಡುವ ಮಂತ್ರಿ ಅಥವಾ ರಾಣಿಯ ಚಾಲಾಕಿತನ, ಸಿಪಾಯಿಯ ಸಾವಧಾನ – ಈ ಕಾಯಿಗಳ ನಡುವೆ ಗತ್ತಿನಿಂದ ನಿಲ್ಲುತ್ತಾನೆ ರಾಜ. ಯೋಚಿಸಿ ನೋಡಿ: ಈ ಕಾಯಿಗಳೆಲ್ಲ ನಮಗೆ ಒಂದೊಂದು ಗುಣವನ್ನೇ ಸೂಚಿಸುತ್ತಿವೆ ಅಲ್ಲವೆ?

ಚೆಸ್ ಮೇಲ್ನೋಟಕ್ಕೆ ಒಬ್ಬರನ್ನೊಬ್ಬರು ಹತ್ತಿಕ್ಕುವ ಆಟ. ಆದರೆ, ಅಂತರಾರ್ಥ ಬೇರೆಯೇ ಇದೆ. ಅದು ಅಹಂಕಾರವನ್ನು ಶಮನಗೊಳಿಸುವ, ಭ್ರಮೆಯ ಬಲೂನುಗಳಿಗೆ ವಾಸ್ತವದ ಸೂಜಿಮೊನೆ ಚುಚ್ಚುವ ಆಟ. ಬದುಕಿನ ಸವಾಲುಗಳನ್ನು ಎದುರಿಸಲು ನಮ್ಮನ್ನು ಸಜ್ಜುಗೊಳಿಸಬೇಕಾದ ಮಾರ್ಗಗಳನ್ನು ಸಜ್ಜುಗೊಳಿಸುತ್ತಲೇ, ಆ ಮಾರ್ಗದಲ್ಲಿ ನೀತಿನಿಯಮಗಳಿಗೆ ಬದ್ಧವಾಗಿರುವಂತೆಯೂ ಒತ್ತಾಯಿಸುತ್ತದೆ. ಸೋಲು ಗೆಲುವುಗಳಷ್ಟೇ ಚದುರಂಗದಲ್ಲಿಲ್ಲ. ಇಬ್ಬರೂ ಆಟಗಾರರು ಉಡದಂತೆ ಜಿಗುಟು ಸ್ವಭಾವದವರಾದರೆ, ಸಮಬಲದ (ಡ್ರಾ) ಅವಕಾಶವೂ ಚೆಸ್‌ನಲ್ಲುಂಟು. ತಿಳಿದವರು ಚೆಸ್ ಆಟವನ್ನು ವಿಜ್ಞಾನ ಎನ್ನುತ್ತಾರೆ. ಗಣಿತ ಎನ್ನುತ್ತಾರೆ. ಕಲೆ, ಬೌದ್ಧಿಕ ಕಸರತ್ತು, ತತ್ವಜ್ಞಾನದ ರೂಪದಲ್ಲೂ ಅನೇಕರಿಗೆ ಕಂಡಿದೆ.

ಚದುರಂಗದ ಮನೆಯಲ್ಲಿ ಇರುವುದು ಅರವತ್ತನಾಲ್ಕು ಮನೆಗಳಷ್ಟೇ. ಆದರೆ, ಆ ಮನೆಗಳ ಚೌಕಟ್ಟಿನಲ್ಲಿ ಸಾಧ್ಯವಾಗುವ ಅಸಂಖ್ಯ ಚಲನೆಗಳು ಬದುಕಿನ ಚೆಲುವು ಹಾಗೂ ಅಗಣಿತ ಸಾಧ್ಯತೆಗಳ ಸಂಕೇತವೂ ಹೌದು. ಅರವತ್ತನಾಲ್ಕು ಚೌಕಗಳಲ್ಲಿನ ಪಯಣ, ಬದುಕಿನ ಅರವತ್ತು ಸಂವತ್ಸರಗಳ ಅನುಭವದ ಸಾರಕ್ಕೆ ಕಡಿಮೆಯೇನಲ್ಲ.

ಚದುರಂಗದ ಮನೆ ಬದುಕಲು ಬೇಕಾದ ಕೌಶಲವನ್ನು ಕಲಿಸುತ್ತದೆ. ಬದುಕಿನ ಸಾಧ್ಯತೆಗಳನ್ನೂ ಮನದಟ್ಟಾಗಿಸುತ್ತದೆ. ಮಕ್ಕಳು ಬದುಕಿನ ಸವಾಲುಗಳನ್ನು ಅರಿಯಲು ಹಾಗೂ ಆ ಸವಾಲುಗಳನ್ನು ಎದುರಿಸುವ ಆತ್ಮವಿಶ್ವಾಸ ಸಿದ್ಧಿಸಿಕೊಳ್ಳಲು ಚೆಸ್ ಸೊಗಸಾದ ಆಟ. ಆಡಾಡತಾ ಆಯುಷ್ಯ ಎನ್ನುವಂತೆ, ಆಡಾಡತಾ ಚೆಸ್ ಆಟದಲ್ಲಿ ಕಲಿಕೆ.

ಮತ್ತೆ ಟೀವಿಯ ವಿಷಯ ನೆನಪಿಸಿಕೊಳ್ಳಿ. ಮಕ್ಕಳ ಏಕಾಗ್ರತೆಗೆ ಟೀವಿ ತೊಡಕು. ಅಷ್ಟು ಮಾತ್ರವಲ್ಲ, ಯೋಚಿಸುವ ಶಕ್ತಿಯನ್ನೂ ಮೊಟಕುಗೊಳಿಸುತ್ತದೆ. ಅಷ್ಟಲ್ಲದೆ ಟೀವಿಯನ್ನು ಮೂರ್ಖರ ಪೆಟ್ಟಿಗೆ ಎನ್ನಲಾಗುತ್ತದೆಯೆ? ಚದುರಂಗದ ವಿಷಯವೇ ಬೇರೆ: ಚೆಸ್ ಆಟ ಮಕ್ಕಳಲ್ಲಿ ಏಕಾಗ್ರತೆ ಬೆಳೆಸುತ್ತದೆ. ಯೋಚಿಸುವ ಸಾಮರ್ಥ್ಯವನ್ನೂ ಉದ್ದೀಪಿಸುತ್ತದೆ. ಅಷ್ಟಲ್ಲದೆ ಚೆಸ್ ಜಾಣ ಜಾಣೆಯರ ಆಟ ಎಂದು ಕರೆಸಿಕೊಂಡಿದೆಯೆ?

ಟೀವಿ ಮತ್ತು ಮೊಬೈಲುಗಳು ಮನುಷ್ಯರನ್ನು ದ್ವೀಪಗಳನ್ನಾಗಿಸುತ್ತವೆ. ಜಡವಾಗಿಸುತ್ತವೆ. ಚೆಸ್ ಇದಕ್ಕೆ ತದ್ವಿರುದ್ಧ. ಚೆಸ್ ಇಬ್ಬರು ಆಡುವ ಆಟ. ತನ್ನ ಆಟವನ್ನು ಆಡುವುದರ ಜೊತೆಗೆ ಎದುರಾಳಿಯ ಮನಸ್ಸಿನ ನಡೆಗಳನ್ನೂ ಊಹಿಸಬೇಕು. ಚೆಸ್ ಅಪಾರ ಸೃಜನಶೀಲತೆಯನ್ನು ಅಪೇಕ್ಷಿಸುವ ಆಟ. ಮನಸ್ಸುಗಳನ್ನು ಓದುವ ಆಟ. ಮನಸ್ಸನ್ನು ಓದುವುದೆಂದರ, ಪರಸ್ಪರ ಅರ್ಥೈಸಿಕೊಳ್ಳುವುದೆಂದೇ ಅರ್ಥ. ಹಾಗಾಗಿ, ಚೆಸ್‌ಗೆ ಮನಸ್ಸನ್ನು ಬೆಸೆಯುವ ಸಾಮರ್ಥ್ಯವೂ ಇದೆ.

ಟೀವಿಯ ಪ್ರಖರ ಬೆಳಕು ಮಕ್ಕಳ ದೃಷ್ಟಿಯನ್ನು ಮಬ್ಬಾಗಿಸುತ್ತದೆ. ಚೆಸ್ ಆಟ ಮಕ್ಕಳ ಮನಸ್ಸನ್ನು ಬೆಳಗಿಸುತ್ತದೆ. ಈಗ ಹೇಳಿ, ಟೀವಿಯ ಎದುರಿನಿಂದ ಮಕ್ಕಳನ್ನು ಏಳಿಸಿ ಚದುರಂಗದ ಹಾಸಿನ ಎದುರು ಕೂರುವಂತೆ ಹೇಳಲು ಬೇರೆ ಕಾರಣ ಬೇಕೆ? ಹಾಂ, ಮಕ್ಕಳನ್ನು ಎಬ್ಬಿಸಿದರೆ ಸಾಲದು. ಮೂರ್ಖರ ಪೆಟ್ಟಿಗೆ ಎದುರಿನಿಂದ ಪಾಲಕರೂ ಏಳಬೇಕು. ಚಿಣ್ಣರೊಂದಿಗೆ ದೊಡ್ಡವರೂ ಆಟಕ್ಕೆ ಕೂರಿ. ಮಕ್ಕಳೊಂದಿಗೆ ಆಟಕ್ಕೆ ಕೂರುವುದೆಂದರೆ ಮಗುವಾಗುವುದೆಂದೇ ಅರ್ಥ.

ಪ್ರತಿಕ್ರಿಯಿಸಿ: feedback@sudha.co.in

